# ‘ಸುಶ್ರಾವ್ಯ’ದ ಸ್ವರಧ್ಯಾನಿ

■ ಪೂರ್ಣಿಮಾ ಬಳಗುಳಿ

## ಸಪ್ತಕ

ಹೆಗಡೆ ಕುಟುಂಬಕ್ಕೆ ಸಂಗೀತವೇ ಉಸಿರು. ಅಂತೆಯೇ ತಮ್ಮ ಮನೆಗಳಿಗೆ ‘ಸುಶ್ರಾವ್ಯ’ ಹಾಗೂ ‘ಸುಸ್ವರ’ ಎಂದೂ ಸಂಗೀತಕ್ಕಾಗಿಯೇ ಮುಡಿಪಾಗಿಟ್ಟಿರುವ ಸಂಸ್ಥೆಗೆ ‘ಸಪ್ತಕ’ ಎಂದೂ ಹೆಸರಿಟ್ಟಿದ್ದಾರೆ. ತಬಲಾ ವಾದಕ ಜಿ.ಎಸ್.ಹೆಗಡೆ ಹುಟ್ಟುಹಾಕಿರುವ ‘ಸಪ್ತಕ’ ಹಿಂದೂಸ್ತಾನಿ ಸಂಗೀತವನ್ನು ಬೆಳೆಸುತ್ತಿರುವುದರ ಜತೆಗೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಕೆಲಸ ಮಾಡುತ್ತಿದೆ.

ವಿಳಾಸ: ಸಪ್ತಕ, 58, ಸುಶ್ರಾವ್ಯ, 3ನೇ ಮುಖ್ಯ ರಸ್ತೆ, ಮಿಲ್ಕ್ ಕಾಲೊನಿ, ಮಲ್ಲೇಶ್ವರಂ (ಪಶ್ಚಿಮ), ಬೆಂಗಳೂರು–560055,
ದೂರವಾಣಿ: 23577829



ಗಾವುದ ದೂರದಲ್ಲಿ ವಾಹನದ ಹಾರ್ನ್ ಕೇಳಿದರೂ ಸಾಕು, ಆ ಬಾಲಕನ ಕಣ್ಣಲ್ಲಿ ಬೆರಗು! ಅಲೆ ಅಲೆಯಾಗಿ ತೇಲಿ ಬರುವ ಘಂಟೆಯ ನಾದಕ್ಕೆ ನಾಲ್ಕರ ಪೋರ ಎಲ್ಲೋ ಕಳೆದುಹೋಗುತ್ತಿದ್ದ. ಇಷ್ಟೇ ಆದರೆ ಆತನ ಹೆತ್ತವರಿಗೆ ಇದೊಂದು ಅಚ್ಚರಿ ಆಗುತ್ತಿರಲಿಲ್ಲವೇನೋ! ಶಬ್ದ–ನಾದಗಳ ಗುಂಗು ಹತ್ತಿಸಿಕೊಂಡ ಮಗ ಅವುಗಳಲ್ಲಿ ಸಪ್ತಸ್ವರಗಳನ್ನು ಗುರುತಿಸುವ ಹೊತ್ತಿಗೆ ಹೆತ್ತವರಿಗೆ ಪವಾಡವೇ ನಡೆದಂಥ ಭಾವ. ಅಮ್ಮನ ‘ಸ್ವರ’ ಜ್ಞಾನಕ್ಕೆ ಅಪ್ಪ ‘ತಾಳ’ ಹಾಕುತ್ತಿದ್ದ. ಸ್ವರ, ಲಯ, ತಾಳದ ಮೂರ್ತ ರೂಪವೇ ಮಗ!

ಸ್ವರ ಸಾಮ್ರಾಟರಾದ ಅಜಯ್ ಚಕ್ರವರ್ತಿ, ಉಲ್ಲಾಸ್ ಕಶಾಲ್ಕರ್, ವಿ.ಜಿ.ಜೋಗ್, ಮಷ್ಕುರ್ ಅಲಿ ಖಾನ್, ಗಿರಿಜಾದೇವಿ ಮುಂತಾದವರ ಸಮ್ಮುಖದಲ್ಲಿ ಹಾಡಿ ಸೈ ಎನ್ನಿಸಿಕೊಂಡಾಗ ಆಗಿನ್ನೂ ಈತನಿಗೆ 12 ವರುಷ. ಕೋಲ್ಕತ್ತಾದ ಸಂಗೀತ ಸಂಶೋಧನಾ ಸಂಸ್ಥೆಯಲ್ಲಿ ಜರುಗಿದ ಆ ಕಾರ್ಯಕ್ರಮ ಇನ್ನೂ ಕಣ್ಣಿಗೆ ಕಟ್ಟಿದಂತಿದೆ!

ಹಿಂದೂಸ್ತಾನಿ ಸಂಗೀತದಲ್ಲಿ ಭರವಸೆಯ ಗಾಯಕ ಎನಿಸಿಕೊಂಡಿರುವ ಧನಂಜಯ ಹೆಗಡೆ, ಹೀಗೆ ತಮ್ಮ ಬಾಲ್ಯದ ‘ಪ್ರಜ್ಞಾ ಪ್ರವಾಹ’ ಕ್ಕೆ ಜಾರಿದಾಗ ಅವರ ಮನೆ ‘ಸುಶ್ರಾವ್ಯ’ದಲ್ಲಿ ಸಂಗೀತ ದಯ ಮಾಡಿಸಿತ್ತು. ‘ದಯ ಮಾಡೋ ರಂಗ ದಯ ಮಾಡೋ...’ ಎಂಬ ದಾಸವಾಣಿಗೆ ಮಗ ಸ್ವರ ಪೋಣಿಸಿದರೆ ಅಮ್ಮ ಗೀತಾ ಹೆಗಡೆ ಮುಖದಲ್ಲಿ ಮಂದಹಾಸ. ಅಪ್ಪ ಜಿ.ಎಸ್.ಹೆಗಡೆ ತಲೆದೂಗುತ್ತಲೇ ತಾಳ ಹಾಕುತ್ತಿದ್ದರು.

ಅಮ್ಮ ಸಂಗೀತ ಬೋಧಕಿ, ಉತ್ತಮ ಗಾಯಕಿ ಕೂಡ. ಅಪ್ಪ ಕಾಲೇಜು ದಿನಗಳಲ್ಲಿಯೇ ತಬಲಾ ಗೀಳಿಗೆ ಬಿದ್ದವರು. ಯಕ್ಷಗಾನ ದಿಗ್ಗಜರ ಕೆರೆಮನೆ ಕುಟುಂಬದ ಕುಡಿಗೆ ಬಾಲ್ಯದಲ್ಲಿಯೇ ಸ್ವರ, ತಾಳ, ನಾಟ್ಯ ಹಾಗೂ ಅಭಿನಯದ ನಂಟು. ‘ನಾದಲೋಕ’ದಲ್ಲಿ ಅರಳಿದ ಸಹಜ ಪ್ರತಿಭೆ ಧನಂಜಯ.

ಹುಟ್ಟಿದ್ದು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಗುಣವಂತೆಯಲ್ಲಿ. ತಂದೆ ಬ್ಯಾಂಕ್ ಅಧಿಕಾರಿಯಾಗಿದ್ದರಿಂದ ಊರೂರು ಅಲೆದಾಟ. ಹೋದಲ್ಲೆಲ್ಲಾ ಚಾಚೂ ತಪ್ಪದೇ ಸಂಗೀತದ ಪಾಠ. ಶಾಲಾ ದಿನಗಳಲ್ಲಿಯೇ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಗೆದ್ದ ಬಹುಮಾನಗಳನ್ನು ಲೆಕ್ಕವಿಟ್ಟವರಿಲ್ಲ. ಸಂಗೀತ ಕಲಿಕೆಗೆ ಅಮ್ಮನೇ ಮೊದಲ ಗುರು. ಅಲ್ಲಿಂದ ಶುರುವಾದ ‘ಶಾಸ್ತ್ರೀಯ’ ಕಲಿಕೆಗೆ ಮುಂದೆ ಪಂಡಿತ್ ವಿನಾಯಕ ತೊರವಿ ಮಾರ್ಗದರ್ಶನ. ಸಂಗೀತ, ಹಾಡುಗಾರಿಕೆ, ಕಲಿಕೆ ಮುಂತಾದ ವಿಚಾರಗಳ ಬಗ್ಗೆ ಇದ್ದ ನಿಲುವುಗಳು ಬದಲಾದದ್ದೇ ತೊರವಿ ಗರಡಿಯಲ್ಲಿ.



‘ಬೆಂಗಳೂರಿನಲ್ಲಿ ತೊರವಿ ಅವರ ಬಳಿ 1989 ರಿಂದ ಸುಮಾರು 14 ವರ್ಷಗಳ ಕಾಲ ಗುರುಕುಲ ಪದ್ಧತಿಯಲ್ಲಿ ಹಠಕ್ಕೆ ಬಿದ್ದಂತೆ ಸಂಗೀತ ಕಲಿಕೆ. ಗುರುವಿನ ಜತೆ ಒಡನಾಟ, ಅವರೊಂದಿಗೆ ದೇಶ–ವಿದೇಶ ಪ್ರವಾಸ, ಸಹಗಾಯನ ಕಲಿಕೆಯ ಭಾಗವಾಗಿದ್ದವು. ಈ ಹಂತದಲ್ಲಿ ನಾನು ಸಂಗೀತವನ್ನು ಬೇರೆಯದೇ ರೀತಿಯಲ್ಲಿ ಗ್ರಹಿಸತೊಡಗಿದೆ’ ಎಂದು ಧನಂಜಯ, ತಾವು ಕಲಾವಿದನಾಗಿ ಹೊರಹೊಮ್ಮಲು ಕಾರಣವಾದ ಮಹತ್ವದ ಘಟ್ಟವನ್ನು ಮೆಲುಕು ಹಾಕುತ್ತಾರೆ.

‘ಯಕ್ಷಗಾನ ವಂಶಪಾರಂಪರ್ಯ ಕೊಡುಗೆ. ಅನೇಕ ಕಡೆ ಪ್ರದರ್ಶನ ಕೂಡ ಕೊಟ್ಟಿದ್ದೇನೆ. ಆದರೆ ಎರಡು ಕಲೆಗಳನ್ನು ಒಟ್ಟಿಗೆ ಸಲಹುವುದು ಕಷ್ಟ. ಒಂದು ಬಿಂದುವಿನಲ್ಲಿ ನನಗೆ ಯಕ್ಷಗಾನವೋ, ಸಂಗೀತವೋ ಎನ್ನುವ ಪ್ರಶ್ನೆ ಕಾಡಿತು. ಕೊನೆಗೂ ಸಂಗೀತಕ್ಕೆ ಮನಸೋತೆ. ‘ಸ್ವರ’ ಸಾಮ್ರಾಜ್ಯಕ್ಕೆ ನಾನೇ ಅಧಿಪತಿ. ಯಕ್ಷಗಾನ ಹಾಗಲ್ಲ; ಅದಕ್ಕೆ ‘ಮೇಳ’ ಮಿತಿ ಇದೆಯಲ್ಲ’ ಎನ್ನುವುದು ಅವರ ತರ್ಕ.

ತೊರವಿ ಅವರ ಬಳಿ ಕಲಿಯುತ್ತಿದ್ದಾಗ ಧನಂಜಯ ಸುಮಾರು 10 ವರ್ಷ ಸಾರ್ವಜನಿಕ ಕಾರ್ಯಕ್ರಮ ಕೊಟ್ಟಿರಲಿಲ್ಲವಂತೆ. ಅದು ಗುರುಗಳ ಆಣತಿ ಕೂಡ ಆಗಿತ್ತು. ‘ಕಲಿಕೆಯ ದೃಷ್ಟಿಯಿಂದ ಮಾತ್ರವಲ್ಲ; ಕಲಾವಿದನಾಗಿ ಬೆಳೆಯಲು ಇದು ಹೆಚ್ಚು ಉಪಯುಕ್ತ ಸಲಹೆ ಆಗಿತ್ತು’ ಎನ್ನುತ್ತಾರೆ ಅವರು. ತೊರವಿ, ಭೀಮಸೇನ ಜೋಶಿ, ಉಲ್ಲಾಸ್ ಕಶಾಲ್ಕರ್ ಗಾಯನ ಹಾಗೂ ವ್ಯಕ್ತಿತ್ವಕ್ಕೆ ಮಾರುಹೋದವರು ಧನಂಜಯ. ಕಿರಾನಾ ಘರಾಣೆಯ ಜೋಶಿ ಹಾಗೂ ಗ್ವಾಲಿಯರ್ ಘರಾಣೆಯ ಕಶಾಲ್ಕರ್ ‘ಕಾಂಬಿನೇಶನ್’ ಧನಂಜಯರ ಹಾಡುಗಾರಿಕೆಯಲ್ಲಿ ಎದ್ದು ಕಾಣುವ ಅಂಶ. ಇನ್ನು ಲಯ ಹಾಗೂ ತಾಳದ ಮೇಲಿನ ಹಿಡಿತ ಅಪ್ಪಟ ಸ್ವಂತಿಕೆಯ ಪ್ರಯತ್ನ. ಯಮನ್, ಪೂರಿಯಾ, ಮಿಯಾ ಕಿ ತೋಡಿ, ಮಿಯಾ ಕಿ ಮಲ್ಹಾರ್, ಭಾಗೇಶ್ರೀ ಇತ್ಯಾದಿ ಪಾರಂಪರಿಕ ರಾಗಗಳು ಧನಂಜಯರ ನೆಚ್ಚಿನ ರಾಗಗಳು.

ಮುಂಬೈನಲ್ಲಿ ಕರ್ನಾಟಕ ಬ್ಯಾಂಕ್ ಶಾಖಾ ವ್ಯವಸ್ಥಾಪಕರಾಗಿರುವ ಧನಂಜಯ್ , ವಾಣಿಜ್ಯ ನಗರಿ ಸಂಗೀತಕ್ಕೆ ಅವಕಾಶಗಳ ಹೆಬ್ಬಾಗಿಲು ಎನ್ನುತ್ತಾರೆ. ಕಳೆದ 8 ವರ್ಷಗಳಿಂದ ಅಲ್ಲಿ ನೆಲೆಸಿರುವ ಅವರು ದೇಶ–ವಿದೇಶಗಳಲ್ಲಿ ಸಾಕಷ್ಟು ಕಛೇರಿ ನಡೆಸಿಕೊಟ್ಟಿದ್ದಾರೆ. ಪತ್ನಿ ಪ್ರತಿಮಾ ಹೆಗಡೆ ಕೂಡ ಸಂಗೀತ ಆರಾಧಕಿ. ನಾಲ್ಕು ವರ್ಷದ ಮಗ ಸುಯೋಗನಿಗೆ ಅಪ್ಪನ ಹಾದಿಯಲ್ಲಿಯೇ ಸಾಗುವ ಛಾತಿ. ■